# ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ನಿಯಮಿತ, ಮಡಿಕೇರಿ

**(ಸ್ಥಾಪನೆ : 1921)**

---

**ಹಣಕಾಸಿನ ಆಸ್ತಿಗಳ ಪ್ರತಿಭೂತಿಕರಣ ಮತ್ತು ಪುನರ್ ನಿರ್ಮಾಣ ಹಾಗೂ ಪ್ರತಿಭೂತಿ ಹಿತಾಸಕ್ತಿ ಕಾಯ್ದೆ 2002 ನಿಯಮ 8(6)ರ ಮತ್ತು ಪ್ರತಿಭೂತಿ ಹಿತಾಸಕ್ತಿ (ಜಾರಿಗೊಳಿಸುವಿಕೆ) ನಿಯಮಗಳು 2002ರ ರಂತೆ ಅನ್ವಯ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಮಾರಾಟದ ಸಾರ್ವಜನಿಕ ಪ್ರಕಟಣೆ ನೋಟಿಸ್**

ಅಧಿಕೃತ ಅಧಿಕಾರಿಯವರು ಸಾರ್ವಜನಿಕರಿಗೆ ಹಾಗೂ ವೈಯುಕ್ತಿಕವಾಗಿ ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಈ ಕೆಳಗೆ ತಿಳಿಸಿದ ಶಾಖೆಗಳಿಗೆ ಸಾಲಗಾರರು/ಜಾಮೀನುದಾರರು ಅಡಮಾನಗೊಳಿಸಿದ ಈ ಕೆಳಗೆ ನಮೂದಿಸಿದ ಸ್ವತ್ತುಗಳನ್ನು ಅಧಿಕೃತ ಅಧಿಕಾರಿಯವರಯ ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಈ ಸ್ಥಿರಾಸ್ತಿಯನ್ನು **"ಎಲ್ಲಿ ಹೇಗಿದೆಯೋ ಹಾಗೆ"**, **"ಎಲ್ಲಿ ಏನಿದೆಯೋ ಹಾಗೆ"** ಮತ್ತು **"ಯಥಾಸ್ಥಿತಿ"** ಯಲ್ಲಿ ಈ ಕೆಳಗೆ ತಿಳಿಸಿದ ಸಾಲಗಾರರು/ಜಾಮೀನುದಾರರು ಸಾಲದ ಬಾಕಿ ಮೊತ್ತವನ್ನು ಪಾವತಿಸಲು ವಿಫಲರಾಗಿರುವುದರಿಂದ ಸಾಲದ ವಸೂಲಾತಿಗೆ ಕೆಳಗೆ ತಿಳಿಸಿದ ದಿನಾಂಕದಂದು ಸ್ಥಿರಾಸ್ತಿಯನ್ನು ಮಾರಾಟ ಮಾಡಲಾಗುವುದು.

| ಕ್ರ ಸಂ | ಶಾಖೆಯ ಹೆಸರು/ ಸಾಲಗಾರರ ಹೆಸರು ಮತ್ತು ವಿಳಾಸ | ಸ್ಥಿರಾಸ್ತಿ(ಗಳ)ಯ ಸಂಕ್ಷಿಪ್ತ ವಿವರ. | ಸಾಲದ ಖಾತೆ ಸಂಖ್ಯೆ ಮತ್ತು ಸಾಲದ ಬಾಕಿ ಉಳಿದಿರುವ ಮೊತ್ತ | 1. ಮೀಸಲು ಬೆಲೆ<br>2. ಇಎಂಡಿ ಮೊತ್ತ | ಹರಾಜು ನಡೆಯುವ ದಿನಾಂಕ, ವೇಳೆ ಮತ್ತು ಸ್ಥಳ |
|---|---|---|---|---|---|
| 1. | **ಶಾಖೆ: ವಿರಾಜ ಪೇಟೆ** | | | | |
| A. | **ಶ್ರೀ ಹೆಚ್ ಕೆ ಪುಷ್ಪರಾಜ್,**<br>**ಬಿನ್ ಲೇಟ್ ಕದ್ರಿವೇಲ್,**<br>ಮಲೆತಿರಿಕೆ ಬೆಟ್ಟ (Malethikerike Betta),<br>ಡೆಂಟಲ್‌ಕಾಲೇಜ್ ಹತ್ತಿರ,<br>ಸಿದ್ದಾಪುರ ರಸ್ತೆ, ವಿರಾಜಪೇಟೆ | ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು, ಬ್ಲಾಕ್ 3 ರಲ್ಲಿರುವ ಸರ್ವೇ ನಂ.300/30 ರಲ್ಲಿ $3^3/_4$ ಸೆಂಟ್ಸ್ ಪರಿವರ್ತಿತ ನಿವೇಶನ ಸ್ವತ್ತಿಗೆ ಚಕ್ಕುಬಂದಿ:-<br>ಪೂರ್ವಕ್ಕೆ: ಸರ್ವೆ ನಂ.300/104,<br>ಪಶ್ಚಿಮಕ್ಕೆ: ಸರ್ವೆ ನಂ.300,<br>ಉತ್ತರಕ್ಕೆ : ಸರ್ವೆ ನಂ.300/104,<br>ದಕ್ಷಿಣಕ್ಕೆ: ರಸ್ತೆ.<br>ಇದರ ಮಧ್ಯೆ ಇರುವ ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣ ಸೇರಿದಂತೆ 374 ಚದರ ಮೀಟರ್ ಕಟ್ಟಡ. | **ಖಾತೆ ಸಂಖ್ಯೆ** : 121000766149<br><br>**ಬಾಕಿ ಸಾಲ** : ರೂ.9,79,801/- ದಿನಾಂಕ:12-07-2023 ರಂದು ಇದ್ದಂತೆ ಮತ್ತು ಮುಂದಿನ ದಿನಾಂಕದಿಂದ ಬಡ್ಡಿ ಮತ್ತು ಇತರೇ ಖರ್ಚು ವೆಚ್ಚಗಳು ಸೇರಿಕೊಳ್ಳಲಾಗುತ್ತದೆ. | 1. Rs.7,35,000/-<br><br>2.Rs.73,500/- | **ದಿನಾಂಕ** : 21-08-2023<br><br>**ಸಮಯ** : ಮಧ್ಯಾಹ್ನ 2.30 ರಿಂದ 4.00 ಗಂಟೆಯವರೆಗೆ<br><br>**ಸ್ಥಳ:** ಕೊಡಗು ಡಿಸಿಸಿ ಬ್ಯಾಂಕಿನ ವಿರಾಜಪೇಟೆ ಶಾಖೆ, ವಿರಾಜಪೇಟೆ |

| | | | | | |
|---|---|---|---|---|---|
| B | **ಶ್ರೀ ಎಸ್ ಟಿ ಮಹೇಂದ್ರಕುಮಾರ್, ಬಿನ್ ಲೇಟ್ ಎಸ್.ಸಿ.ತಮ್ಮಯ್ಯ** ನಂ.15/6, ಗಾಂಧಿ ಮಂಟಪದ ಹತ್ತಿರ, ಎಂ.ಜಿ.ರಸ್ತೆ, ಮಡಿಕೇರಿ–571201 | ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದಲ್ಲಿರುವ ಸರ್ವೆ ನಂ.47/23ರ 3.00 ಸೆಂಟ್ಸ್ ಪರಿವರ್ತಿತ ನಿವೇಶನದ ಗ್ರಾಮ ಪಂಚಾಯಿತಿ ಸ್ವತ್ತಿನ ಸಂಖ್ಯೆ:151800107000320003 ವಿಸ್ತೀರ್ಣ ಪೂರ್ವ ಪಶ್ಚಿಮ 12 ಮೀಟರ್ ಮತ್ತು ಉತ್ತರ ದಕ್ಷಿಣ 10.20 ಮೀಟರ್ **ಸ್ವತ್ತಿಗೆ ಚಕ್ಕುಬಂದಿ:–** ಪೂರ್ವಕ್ಕೆ: ಸರ್ವೆ ನಂ.47/4 ಖಾಲಿ ನಿವೇಶನ ಮತ್ತು ರಸ್ತೆ, ಪಶ್ಚಿಮಕ್ಕೆ : ಸರ್ವೆ ನಂ.47/4, ಉತ್ತರಕ್ಕೆ : ಸರ್ವೆನಂ.47/1, ದಕ್ಷಿಣಕ್ಕೆ : ಸರ್ವೆ ನಂ.47/1. ಇದರ ಮಧ್ಯೆ ಇರುವ ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣ ಸೇರಿದಂತೆ ಒಟ್ಟು 121.41 ಚದರ ಮೀಟರ್. | **ಖಾತೆ ಸಂಖ್ಯೆ : 121000801039** **ಬಾಕಿ ಸಾಲ** : ರೂ.**9,69,251/–** ದಿನಾಂಕ:12–07–2023 ರಂದು ಇದ್ದಂತೆ ಮತ್ತು ಮುಂದಿನ ದಿನಾಂಕದಿಂದ ಬಡ್ಡಿ ಮತ್ತು ಇತರೇ ಖರ್ಚು ವೆಚ್ಚಗಳು ಸೇರಿಕೊಳ್ಳಲಾಗುತ್ತದೆ. | 1. Rs.7,30,000/– 2.Rs.73,000/– | **ದಿನಾಂಕ** : 21–08–2023 **ಸಮಯ** : ಪೂರ್ವಾಹ್ನ 11.00 ರಿಂದ 12.00 ಗಂಟೆಯವರೆಗೆ **ಸ್ಥಳ:** ಕೊಡಗು ಡಿಸಿಸಿ ಬ್ಯಾಂಕಿನ , ವಿರಾಜಪೇಟೆ |

## – : ಬಹಿರಂಗ ಹರಾಜಿನ ಇತರ ಷರತ್ತು, ನಿಯಮ ಮತ್ತು ನಿಬಂಧನೆಗಳು : –

**ಮಾರಾಟವು ಪ್ರತಿಭೂತಿ ಹಿತಾಸಕ್ತಿ (ಜಾರಿಗೊಳಿಸುವಿಕೆ) ಕಾಯ್ದೆ 2002 ರಲ್ಲಿ ನೀಡಲಾದ ಷರತ್ತುಗಳು ಮತ್ತು ಈ ಕೆಳಗೆ ನಮೂದಿಸಿದ ಷರತ್ತುಗಳನ್ವಯ ನಡೆಯಲಿದೆ.**

1. ಸ್ವತ್ತನ್ನು **"ಹೇಗಿದೆಯೋ ಎಲ್ಲಿದೆಯೋ ಮತ್ತು ಹೇಗಿದೆಯೋ ಏನಿದೆಯೋ ಹಾಗೆಯೇ"** ಮಾರಾಟ ಮಾಡಲಾಗುವುದು. ಬ್ಯಾಂಕಿನ ತಿಳುವಳಿಕೆ ಪ್ರಕಾರ ಅಂತಹ ಯಾವುದೇ ಋಣಭಾರವಿರುವುದಿಲ್ಲ.
2. ಹರಾಜು ಪ್ರಕ್ರಿಯೆಯು ಬಹಿರಂಗ ಹರಾಜು ಮೂಲಕವೇ ನಡೆಸಲಾಗುವುದು. ಬಿಡ್ದುದಾರರುಗಳು ಹರಾಜಿನಲ್ಲಿ ಭಾಗವಹಿಸುವ ಮುನ್ನ ಷರತ್ತು ಹಾಗೂ ನಿಯಮಗಳಿಗಾಗಿ ಕೆಳಕಂಡ ಪ್ರಾಧೀಕೃತ ಅಧಿಕಾರಿಯನ್ನು / ಸಂಬಂಧಿಸಿದ ಬ್ಯಾಂಕ್ ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸುವಂತೆ ವಿನಂತಿಸಲಾಗಿದೆ.
3. ಸ್ಥಿರಾಸ್ತಿಯನ್ನು ತಪಾಸಣೆ ನಡೆಸಲು ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆಯ ಒಳಗೆ ಅನುಕೂಲಕರ ಸಮಯದಲ್ಲಿ ಕೆಳಗೆ ತಿಳಿಸಿದ ಬ್ರಾಂಚ್ ವ್ಯವಸ್ಥಾಪಕರು/ಅಧಿಕೃತ ಅಧಿಕಾರಿ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮಡಿಕೇರಿ ಇವರಿಂದ ಮುಂಚಿತವಾಗಿ ಅಪಾಯಿಂಟ್‌ಮೆಂಟ್ ಪಡೆದುಕೊಳ್ಳತಕ್ಕದ್ದು.
4. ಮೇಲ್ಕಂಡ ಸ್ಥಿರಾಸ್ತಿಗಳಿಗೆ ಬಿಡ್ದುದಾರರು ಇ ಎಂ ಡಿ ಮೊತ್ತವನ್ನು ಹರಾಜಿನ ಒಂದು ದಿನ ಮುಂಚಿತವಾಗಿ ಬ್ಯಾಂಕ್‌ನ ಕೆಲಸದ ವೇಳೆ ಒಳಗೆ ಸಲ್ಲಿಸತಕ್ಕದ್ದು.
5. ಮಾರಾಟವನ್ನು ಮೀಸಲು ಬೆಲೆಯಿಂದ ಪ್ರಾರಂಭಿಸಲಾಗುತ್ತದೆ. ಬಿಡ್ದರುಗಳು ರೂ.10,000/–ದ ಪ್ರಮಾಣದಲ್ಲಿ ಬಿಡ್ ಮೊತ್ತವನ್ನು ಹೆಚ್ಚಿಸಬೇಕು. ಬಿಡ್ಡಿಂಗ್ ಕೊನೆಯಲ್ಲಿ ಹೆಚ್ಚಿನ ಮೊತ್ತ ಬಿಡ್ ಮಾಡಿದ ಬಿಡ್ದುದಾರರನ್ನು (ಮೀಸಲು ಬೆಲೆಗಿಂತ ಹೆಚ್ಚಿನ) ಯಶಸ್ವಿ ಬಿಡ್ದುದಾರರೆಂದು ಘೋಷಿಸಲಾಗುವುದು. ಬ್ಯಾಂಕಿನ ಸಂಬಂಧಪಟ್ಟ ಅಧಿಕಾರಿಗಳ ಅನುಮತಿ ಪಡೆದುಕೊಂಡು ಯಶಸ್ವಿ ಬಿಡ್ದುದಾರರ ಪರವಾಗಿ ಮಾರಾಟವನ್ನು ಧೃಡಪಡಿಸಲಾಗುವುದು.

6. ಹರಾಜಿನಲ್ಲಿ ಭಾಗವಹಿಸಲು ಆಸಕ್ತ ಬಿಡ್ಡುದಾರರು ಹಾರಾಜಾಗುವ ಆಸ್ತಿಯ ಕಾಯ್ದಿಟ್ಟ ಬೆಲೆಯ ಸರಿಸಮನಾಗಿ ಶೇಕಡ 10 ರಷ್ಟು ಡಿ ಡಿ ರೂಪದಲ್ಲಿ ಕೆಳಗೆ ತಿಳಿಸಿದ ಅಧಿಕೃತ ಅಧಿಕಾರಿ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ರವರಿಗೆ ಸಂದಾಯವಾಗುವಂತೆ ಸಲ್ಲಿಸಬೇಕು. ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಫಂಡ್ ವರ್ಗಾವಣೆ ಮೂಲಕ ಹರಾಜಿನ ಒಂದು ದಿನ ಮುಂಚಿತವಾಗಿ ಕೆಳಗೆ ತಿಳಿಸಿದ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಆಯಾ ಶಾಖೆಯ ಖಾತೆ ಸಂಖ್ಯೆ/ಐಎಫ್‌ಎಸ್‌ಸಿ ಕೋಡ್‌ಗೆ ಸಂದಾಯವಾಗುವಂತೆ ಪಾವತಿಸಬೇಕು. ಯಶಸ್ವಿಯಾಗದ ಬಿಡ್ಡುದಾರರಿಗೆ ಹಿಂದಿರುಗಿಸಲಾಗುವ ಠೇವಣಿಯಾಗಿ (ಇ.ಎಂ.ಡಿ) ಇರತಕ್ಕದು.
7. ಆಸಕ್ತ ಬಿಡ್ಡುದಾರರು ಇಎಂಡಿ ಪಾವತಿಸಿದ ಕೂಡಲೇ ಸಂಬಂಧಪಟ್ಟ ದಾಖಲೆಗಳು/ವಿವರಗಳ ಪ್ರತಿಗಳನ್ನು ಹರಾಜಿನ ದಿನ ಬೆಳಗ್ಗೆ 10.00 ಗಂಟೆ ಒಳಗಾಗಿ ತಿಳಿಸಿದ ವ್ಯವಸ್ಥಾಪಕರು/ಅಧಿಕೃತ ಅಧಿಕಾರಿ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮಡಿಕೇರಿ, ಕೊಡಗು ಜಿಲ್ಲೆ ಮತ್ತು ಹರಾಜು ನಡೆಯುವ ಶಾಖೆಗೆ ಸಂದಾಯವಾಗುವಂತೆ ಖುದ್ದಾಗಿ ವಿಳಾಸದ ಮೂಲಕ ಸಲ್ಲಿಸಬೇಕು.
   **ಅ)** ಇಎಂಡಿ ಮೊತ್ತವನ್ನುಡಿಡಿ/ಪೇ ಆರ್ಡರ್ ಮೂಲಕ ಸಲ್ಲಿಸಬೇಕು, ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಪಾವತಿಸಿದಲ್ಲಿ ಯುಟಿಆರ್ ಸಂಖ್ಯೆಯೊಂದಿಗೆ ಸ್ವೀಕೃತಿಯೊಂದಿಗೆ ಪ್ರತಿಯನ್ನು ಸಲ್ಲಿಸಬೇಕು..
   **ಆ)** ಬಿಡ್ಡುದಾರರು ಪಾನ್ ಕಾರ್ಡ್, ಗುರುತು ಚೀಟಿ ಮತ್ತು ವಿಳಾಸ ಪುರಾವೆ ಪ್ರತಿಯನ್ನು ಸಲ್ಲಿಸಬೇಕು. ಯಶಸ್ವಿ ಬಿಡ್ಡುದಾರರು ಬಿಡ್ಡ್ ಮೊತ್ತದ ಶೇಕಡಾ 25 ರಷ್ಟು ಪಾವತಿಸುವಾಗ ಈ ಎಲ್ಲಾ ದಾಖಲೆಗಳ ಮೂಲ ಪ್ರತಿಯನ್ನು ಸಲ್ಲಿಸಬೇಕು.
   ಇ) ಬಿಡ್ಡುದಾರರ ಹೆಸರು, ದೂರವಾಣಿ ಸಂಖ್ಯೆ, ವಿಳಾಸ, ಇ–ಮೇಲ್ ವಿಳಾಸವನ್ನು ಒದಗಿಸಬೇಕು
   **ಈ)** ಇಎಂಡಿ ಆನ್‌ಲೈನ್ ಮರುಪಾವತಿಗಾಗಿ ಬಿಡ್ಡುದಾರರುಗಳ ಖಾತೆ ವಿವರ ಒದಗಿಸಬೇಕು. (ಯಶಸ್ವಿಯಾಗದ ಬಿಡ್ಡುದಾರರಿಗೆ).
8. ಯಶಸ್ವಿಯಾಗದ ಬಿಡ್ಡುದಾರರಿಗೆ ಬಿಡ್ಡ್ ನಡೆದ 2 ದಿನಗಳ ಒಳಗಾಗಿ ಇಎಂಡಿ ಮೊತ್ತವನ್ನು ಹಿಂದಿರುಗಿಸಲಾಗುವುದು, ಇಎಂಡಿಯ ಮೇಲೆ ಯಾವುದೇ ಬಡ್ಡಿಯನ್ನು ಕೊಡಲಾಗುವುದಿಲ್ಲ.
9. ಮೇಲೆ ತಿಳಿಸಿದ ಸ್ಥಿರಾಸ್ತಿಯನ್ನು ಮೀಸಲು ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುವುದು ಮತ್ತು ಬಿಡ್ಡುರುಗಳು ಹರಾಜು ಪ್ರಕ್ರಿಯೇಯಲ್ಲಿ ತಮ್ಮ ಆಫರ್ಗಳನ್ನು ಹೆಚ್ಚಿಸಬಹುದು.
10. ಯಶಸ್ವಿ ಬಿಡ್ಡುದಾರರು ಅದೇ ದಿನದಂದು ಬಿಡ್ಡು ಮೊತ್ತದ ಶೇಕಡ 25 ರಷ್ಟು ಹಣವನ್ನು (ಇ.ಎಂ.ಡಿ. ಒಳಗೊಂಡಂತೆ) ಪಾವತಿ ಮಾಡಬೇಕು. ಬಿಡ್ಡಿನ ಬಾಕಿ ಹಣವನ್ನು 15 ದಿನದೊಳಗೆ ಡಿಡಿ/ಆರ್‌ಟಿಜಿಎಸ್/ಆನ್‌ಲೈನ್‌ಯ ಮುಖಾಂತರ ಬ್ಯಾಂಕಿನವರಿಗೆ ಪಾವತಿಸತಕ್ಕದ್ದು. ಒಂದು ವೇಳೆ ಪಾವತಿಸಲು ವಿಫಲರಾದಲ್ಲಿ ಈಗಾಗಲೇ ಪಾವತಿಸಿದ ಇ.ಎಂ.ಡಿ. ಮೊತ್ತವನ್ನು ಯಾವುದೇ ಮುನ್ಸೂಚನೆ ಪತ್ರ ನೀಡದೇ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರು ಮಾರಾಟ ನಡೆಸಲಾಗುವುದು.
11. ಮಾರಾಟಕ್ಕೆ ಸಂಭಂಧಪಟ್ಟಂತೆ ಅಸ್ವಯಿಸುವ ಟಿ.ಡಿ.ಎಸ್ 1% ನ್ನು ಬಿಡ್‌ದಾರರೇ ಪಾವತಿಸಬೇಕು. (ಸ್ವತ್ತಿನ ಮೌಲ್ಯ 50,00,000/– ಕ್ಕಿಂತ ಅಧಿಕವಾದಲ್ಲಿ).
12. ಖರೀದಿದಾರರು ಸ್ವತ್ತಿಗೆ ಸಂಬಂಧಿಸಿದ ಆಸ್ತಿ ನೋಂದಾಣಿ ಮುದ್ರಾಂಕ ಶುಲ್ಕ, ಮಾರಾಟ ಪತ್ರ ನೋಂದಣಿ ವೆಚ್ಚಗಳು ಸೇರಿದಂತೆ ಎಲ್ಲ ವೆಚ್ಚಗಳು, ತೆರಿಗೆಗಳು, ದರಗಳು ಹಾಗೂ ಸರ್ಕಾರ ಅಥವಾ ಇನ್ನಿತರ ಪ್ರಾಧಿಕಾರಗಳಿಗೆ ನೀಡಬೇಕಾದ ಈಗಿನ ಮತ್ತು ಮುಂದಿನ ಶಾಸನಬದ್ಧ ಬಾಕಿಗಳನ್ನು ಪಾವತಿಸಬೇಕು.
13. ಆಸಕ್ತ ಬಿಡ್ಡರುಗಳು ಸ್ವತ್ತನ್ನು ಕುರಿತಂತೆ ಬ್ಯಾಂಕ್ ಹೊರತುಪಡಿಸಿ ಅನ್ಯ ಮೂಲಗಳಿಂದಲೂ ಅದರ ಪೂರ್ವಪರಗಳ ವಿಚಾರಗಳನ್ನು ಮಾಡಿ ಸ್ವತ್ತಿನ ಹಕ್ಕು ಮಿತಿಗುಣ ಮತ್ತು ಪ್ರಮಾಣಗಳ ಬಗ್ಗೆ ವಿಶ್ವಾಸಾರ್ಹತೆ ಪಡೆದು, ಮಾರಾಟಕ್ಕಿಟ್ಟ ಸ್ವತ್ತಿನ ವೆಚ್ಚ, ಋಣಭಾರಗಳು, ಇನ್ನಿತರ ಅಂಶಗಳು ಮುಂತಾದ ಯಾವುದೇ ಬಗೆಯ ಕ್ಲೇಮುಗಳನ್ನು ಬಿಡ್ ಸಲ್ಲಿಸಿದ ನಂತರ ಪರಿಗಣಿಸುವುದಿಲ್ಲ.

14. ಏಕೈಕ ಅರ್ಜಿದಾರನಾಗಿದ್ದಲ್ಲಿ, ಬಿಡ್ ಫಾರ್ಮನಲ್ಲಿ ಉಲ್ಲೇಖಿಸಲಾದ ಬಿಡ್ ಮೊತ್ತವು ಕನಿಷ್ಟ ಒಂದು ಬಿಡ್ ಹೆಚ್ಚಳದ ಮೌಲ್ಯದಿಂದ ಸುಧಾರಿಸಬೇಕು ಇಲ್ಲದೇ/ಆಗದಂತೆ ಮಾರಾಟವನ್ನು ರದ್ದುಗೊಳಿಲಾಗುತ್ತದೆ/ ಮುಂದೂಡಲಾಗುವುದು.

15. ಮಾರಾಟವು ಬ್ಯಾಂಕಿನಿಂದ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ಸಾಲಗಾರರು ಸಾಲದ ಮೊತ್ತವನ್ನು ಮತ್ತು ಖರ್ಚು-ವೆಚ್ಚದ ಜೊತೆಗೆ ಪೂರ್ಣವಾಗಿ ಸಂದಾಯ ಮಾಡಿದ್ದೇ ಆದರೆ ಆಗ ಮಾರಾಟವನ್ನು ನಡೆಸಲಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಬ್ಯಾಂಕ್ ಯಶಸ್ವಿ ಬಿಡ್ಡಿನ ಹಣವನ್ನು ಸಂಪೂರ್ಣ ಬಡ್ಡಿಯಿಲ್ಲದೆ ಮರುಪಾವತಿಸಲಿದೆ.

**16. ನಿಯಮ 9(1) ಸೆಕ್ಯರಿಟಿ ಇಂಟರಸ್ಟ್ (ಎನ್ಫೋರ್ಸ್‌ಮೆಂಟ್), ನಿಯಮ 2002ರ ಅಡಿಯಲ್ಲಿ ಈ ಪ್ರಕಟಣೆಯು ಸಾಲಗಾರಿಗೆ/ಅಡಮಾನದಾರರಿಗೆ ಇದು 15 ದಿನಗಳ ಶಾಸನಬದ್ಧ ಮಾರಾಟದ ನೋಟಿಸ್ ಕೂಡ ಆಗಿರುವುದು.**

**17. ಬಹಿರಂಗ ಹರಾಜನ್ನು ಮೇಲ್ಕಂಡ ಕೊಡಗು ಜಿಲ್ಲಾ ಸಹಕಾರಕೇಂದ್ರ ಬ್ಯಾಂಕ್ ನಿಯಮಿತ, ಇದರ ಶಾಖೆಗಳು ಮತ್ತು ಕೇಂದ್ರ ಕಛೇರಿಯಲ್ಲಿ ನಡೆಸಲಾಗುವುದು.**

18. ಅಧಿಕೃತ ಅಧಿಕಾರಿಯವರು ಬಿಡ್ನ್ನು ಮುಂದೂಡುವ/ರದ್ದು ಮಾಡುವ ಮತ್ತು ಷರತ್ತು ಹಾಗೂ ನಿಯಮಗಳನ್ನು ಯಾವುದೇ ಕಾರಣಗಳನ್ನು ಕೊಡದೇ ಬದಲಿಸುವ ಅಧಿಕಾರವನ್ನು ಹೊಂದಿರುತ್ತಾರೆ.

19. ಆಸ್ತಿಯ ಪರೀವಿಕ್ಷಣೆ ಇನ್ನಿತರ ವಿವರಗಳಿಗಾಗಿ ಬಿಡ್ಡುದಾರರು ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಕೇಂದ್ರಕಛೇರಿ, ಮಡಿಕೇರಿ. ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯನ್ನಾಗಲಿ ಅಥವಾ ದೂರವಾಣಿ ಸಂಖ್ಯೆ : 08272-228324, 229691, 224805 ಅಧಿಕೃತ ಅಧಿಕಾರಿ: ಶ್ರೀ ಟಿ ಜಿ ಗೀರಿಶ್‌ಕುಮಾರ್ ಮೊಬೈಲ್ ಸಂಖ್ಯೆ 7899768331 ಅಥವಾ ಸೇವಾ ಪೂರೈಕೆದಾರರಾದ ಶ್ರೀ ಕೆ.ತಿರುಮಲರಾಜು, ಮೊಬೈಲ್ ಸಂಖ್ಯೆ: 9141231209 ರ ಮೂಲಕ ಅಥವಾ ಸಂಬಂಧಿಸಿದ ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು.

ಸಹಿ/-

ಸ್ಥಳ : ಮಡಿಕೇರಿ

ದಿನಾಂಕ : 18.07.2023

ಅಧಿಕೃತ ಅಧಿಕಾರಿ

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ